ಕಲಿತ ಶಾಲೆಗಳನ್ನು ತೋರಿಸಿದ್ದ. ಅನಂತರ ನಮ್ಮನ್ನು ತಮ್ಮ ತೋಟದ ಹೊಲಕ್ಕೆ ಕರೆದುಕೊಂಡು ಹೋಗಿದ್ದ. ಅಲ್ಲಿ ಅಬ್ಬಿಗೇರಿಯ ಮಂದಿ, ಊರ ಪ್ರಮುಖರು ತೋಟದ ಮನೆಗೇ ಬಂದಿದ್ದರು. ಅಲ್ಲಿ ಒಂದು ಸಮ್ಮೇಳನವೇ ನಡೆದ ಹಾಗೆ ಆಗಿತ್ತು. ಊರಿನ ಕೆಲವು ಗಾಯಕರು ಜಾನಪದ ಹಾಡು ಹಾಡಿದರು. ಕೆಲವರು ಗಿರಡ್ಡಿ ಮತ್ತು ಚಂಪಾ ಬರೆದ ಹಾಡುಗಳನ್ನು ಹಾಡಿದ್ದು ಕೇಳಿ, ಆ ಊರವರ ಆಸಕ್ತಿ ಮತ್ತು ನಮ್ಮ ಈ ಇಬ್ಬರು ಗೆಳೆಯರ ಪ್ರಸಿದ್ಧಿಯನ್ನು ನೆನೆದು ಆಶ್ಚರ್ಯವೆನಿಸಿತ್ತು. ಎಂ.ಎ. ಮಾಡಿಕೊಂಡ ಅನಂತರ ಗಿರಡ್ಡಿ ಒಂದು ವರ್ಷದ ಮಟ್ಟಿಗೆ ಹನುಮನಮಟ್ಟಿಯಲ್ಲಿ ಕೆಲಸ ಮಾಡಿದ. ಅನಂತರ ನಮ್ಮ ಕಾಲೇಜಿಗೆ ಬಂದ. ಚಂಪಾ ಆಗಲೇ ಅಲ್ಲಿ ನೌಕರಿ ಪಡೆದಿದ್ದ. ಬಿ.ಎ., ಎಂ.ಎ. ಎರಡೂ ಫಸ್ಟ್ ಕ್ಲಾಸ್ ಇದ್ದರೂ ನನಗೆ ಎಲ್ಲಿಯೂ ಕೆಲಸ ಸಿಕ್ಕಿರಲಿಲ್ಲ. ಪಿಎಚ್.ಡಿ.ಗೆ ರಜಿಸ್ಟ್ರೇಶನ್ ಮಾಡಿಸಿದ್ದೆ. ಆ ಸಂದರ್ಭದಲ್ಲಿಯೇ ಒಮ್ಮೆ ಪಿಎಂನ ಸಲಹೆಯ ಮೇರೆಗೆ ನಾನು, ಚಂಪಾ ಗೋಕಾಕರನ್ನು ಕಾಣಲು ಬೆಂಗಳೂರಿಗೆ ಹೋಗಿದ್ದೆವು. ಅಷ್ಟೊತ್ತಿಗೆ ಚಂಪಾನ 'ಬಾನುಲಿ', ನನ್ನ 'ನೀನಾ' ಪ್ರಕಟವಾಗಿದ್ದುವು. ಅಲ್ಲಿಂದಲೇ ಮೈಸೂರಿಗೆ ಹೋಗಿ, ಬರುವಾಗ 'ಸಂಕ್ರಮಣ' ಸಂಪಾದಿಸಲು ನಿರ್ಧರಿಸಿದ್ದೆವು. ಧಾರವಾಡಕ್ಕೆ ಮರಳಿದ ಅನಂತರ ಒಂದು ದಿನ ನಮ್ಮ ಮನೆಯಲ್ಲಿ ಬಂದ ಗಿರಡ್ಡಿ, ತಾನೂ ನಮ್ಮೊಡನೆ ಸೇರಿಕೊಳ್ಳುತ್ತೇನೆ ಅಂದ. ಆ ಪ್ರಕಾರ 1964ರಲ್ಲಿ ನಾವು ಮೂವರೂ ಕೂಡಿ ತಲಾ ಹತ್ತು ರೂಪಾಯಿ ಹಾಕಿ 'ಸಂಕ್ರಮಣ' ಪತ್ರಿಕೆ ಆರಂಭಿಸಿದ್ದು ಈಗ ಚರಿತ್ರೆಯ ಭಾಗವಾಗಿದೆ.

ಕೆಲ ಕಾಲದ ಅನಂತರ ನಾನೂ ಕರ್ನಾಟಕ ಕಾಲೇಜಿಗೆ ಬಂದೆ. ಅಲ್ಲಿ ಮತ್ತೆ ಮೂವರೂ ಕೂಡಿದೆವು. ದಿನಾಲೂ ಕೂಡಿಯೇ ಕ್ಯಾಂಟೀನಿಗೆ ಹೋಗುತ್ತಿದ್ದೆವು. ಚಂಪಾ, ಗಿರಡ್ಡಿ, ನಮ್ಮೊಡನೆ ಸೇರುತ್ತಿದ್ದ ಬಿ.ಟಿ. ದೇಸಾಯಿ, ಇಮ್ರಾಪುರ, ಶಿಗ್ಲಿ ಕೂಡಿದರಂತೂ ಮುಗಿದೇ ಹೋಯಿತು! ಚೇಷ್ಟೆ, ಮೋಜು, ಹಾಸ್ಯ, ವ್ಯಂಗ್ಯ, ವಿಡಂಬನೆಗಳ ಜೀವಂತ ಹೊಸತನಕ್ಕೆ ಎಲ್ಲರೂ ಕಾಣಿಕೆ ಸಲ್ಲಿಸುತ್ತಿದ್ದರು. ಅಂಥ ಹೊತ್ತಿನಲ್ಲಿ ಬಿದ್ದುಬಿದ್ದು ನಗುತ್ತ, ತನ್ನ ಮಾತಿಗೆ ತಾನೇ ನಗುತ್ತ ಕೆಮ್ಮತೊಡಗುತ್ತಿದ್ದ ಗಿರಡ್ಡಿಯ ಈ ನಗೆ ಅನಂತರದ ದಿನಮಾನದಲ್ಲಿ ಕಡಿಮೆಯಾಗುತ್ತ, ಪೂರ್ಣ ಇದ್ದಿರಲೇ ಇಲ್ಲವೇನೋ ಎಂಬಂತೆ ಕ್ಷೀಣಿಸಿದ್ದು ಮಾತ್ರ ವಿಚಿತ್ರ! ಎಲ್ಲರೂ ಸ್ಪರ್ಧೆಗೆ ನಿಂತವರಂತೆ ಚೇಷ್ಟೆ ಮಾಡುತ್ತಿದ್ದರು, ನಗುತ್ತಿದ್ದರು, ನಗಿಸುತ್ತಿದ್ದರು. ವಿದ್ಯಾರ್ಥಿ ಜೀವನದಲ್ಲಿ ನಾವು ಪಡೆದದ್ದು ಮುಂದೆಯೂ ಹಾಗೆಯೇ ಲಭಿಸುತ್ತದೆ ಎಂದು ಹೇಗೆ ಹೇಳಲು ಸಾಧ್ಯ? ಅದನ್ನು ನೆನಪಿಸಿಕೊಂಡು ಹೇಳುವುದು, ಆನಂದಿಸುವುದು, ಅಭಿವ್ಯಕ್ತಿಸುವುದು ಮಾತ್ರ ಕರ್ಮವಾಗುತ್ತದೆ. ಗಿರಡ್ಡಿಯ ಪರಿಶ್ರಮ, ಸ್ವಭಾವ, ಛಲಗಾರಿಕೆ ನೋಡಿದರೆ, ಅವನು ಒಂದು ಕಾಲಕ್ಕೆ ದೊಡ್ಡ ಸಾಧನೆಯ ಧಣಿ ಆಗುತ್ತಾನೆ ಎಂದು ಮಾತ್ರ ನಮಗೆ ಅನಿಸಿತ್ತು. ಅವನ ಮಿತ್ರರೆಲ್ಲ ಬೇರೆ ಬೇರೆ ಕಡೆ ಹಂಚಿ ಹೋಗಿದ್ದರೂ ಅವರನ್ನು ಈಗಲೂ ನೆನೆಸುತ್ತಿದ್ದ.

ನಾವು ಚಹ ಕುಡಿಯಲು ಹೋದಾಗ ಒಂದೊಂದು ದಿನ ಒಬ್ಬೊಬ್ಬರು ಬಿಲ್ ಕೊಡುತ್ತಿದ್ದೆವು. ಇದು ಗಿರಡ್ಡಿಗೆ ಸೇರಲಿಲ್ಲ. ಅವನು ತಾನು ತಿಂದ ತಿಂಡಿ, ಚಹದ ಹಣ ಟೇಬಲ್ ಮೇಲೆ ಇಟ್ಟು ಮುಗುಳುನಗುತ್ತ ಸುಮ್ಮನೇ ಕೂಡುತ್ತಿದ್ದ. ಅದನ್ನು ಸೇರಿಸಿಕೊಂಡು ಉಳಿದವರು ಯಾರಾದರೂ ಬಿಲ್ ಸಂದಾಯ ಮಾಡುತ್ತಿದ್ದೆವು. ಗಿರಡ್ಡಿ ಕೊನೆಯ ವರೆಗೂ ತನ್ನ ಅಭ್ಯಾಸ ಉಳಿಸಿಕೊಂಡ, ಅಷ್ಟೇ ಅಲ್ಲ, ತಾನು ಮಾಡುತ್ತಿರುವುದೇ ಒಳ್ಳೆಯ ಪದ್ಧತಿ ಎಂದು ನಮಗೆ ಮತ್ತೆಮತ್ತೆ ತಿಳಿಹೇಳಿದ. ಕಾಲೇಜಿನಲ್ಲಿ ಹೊರಗಿನ ಸಾಹಿತಿಗಳು, ಗಣ್ಯರು ಯಾರೇ ಬಂದರೂ ನಮ್ಮನ್ನು ಕಾಣುತ್ತಿದ್ದರು. ಕೆಲವೊಮ್ಮೆ ಅವರೊಡನೆ ಕ್ಯಾಂಟೀನಿಗೆ ಹೋದ ಸಂದರ್ಭದಲ್ಲಿಯೂ ನಮ್ಮ ಕಿತಾಪತಿ ಗೆಳೆಯರು 'ನಿನ್ನ ಪಾಲಿನದು ಇಟ್ಟು ಬಿಡು' ಎಂದು ಅವನಿಗೆ ಚೇಷ್ಟೆ ಮಾಡುತ್ತಿದ್ದರು.

ಗಿರಡ್ಡಿ ಹುಡುಗಾಟದ ಮೂಲಕ ಹುಡುಕಾಟ ಮಾಡುತ್ತಿದ್ದ, ಏನನ್ನೋ ಹುಡುಕುತ್ತಿದ್ದ. ನಾವು ಚೇಷ್ಟೆ ಮಾಡಿ ಮರೆತುಬಿಡುತ್ತಿದ್ದೆವು. ಆದರೆ, ಗಿರಡ್ಡಿಯ ಸ್ವಭಾವ ಭಿನ್ನ ಬಗೆಯದಾಗಿತ್ತು.